ಆ) ಈ ಯೋಜನೆಯ ಅಂದಾಜು ಮೊತ್ತ ರೂ. 918.20 ಲಕ್ಷವಿದೆ.

ಇ) ಮತ್ತು ಈ) ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಸಚಿವ ಸಂಪುಟದ ಅನುಮೋದನೆ ಪಡೆದು ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.

ಶ್ರೀ ಸುರೇಶ್ ಎಸ್. ಮಾರಿಹಾಳ : ನಾನು ಕೇಳಿರುವ (ಅ) ಪ್ರಶ್ನೆಗೆ ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಸಚಿವ ಸಂಪುಟದ ಅನುಮೋದನೆ ಬೇಕಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಎಷ್ಟು ದಿವಸಗಳಲ್ಲಿ, ಎಷ್ಟು ತಿಂಗಳಲ್ಲಿ ಅಥವಾ ಎಷ್ಟು ವರ್ಷಗಳಲ್ಲಿ? ಕೊಡುತ್ತಾರೆ ಎನ್ನುವ ಬಗ್ಗೆ ಉತ್ತರವನ್ನು ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ : 918.20 ಲಕ್ಷದ ಅಂದಾಜು ಮೊತ್ತ ಇರುವುದರಿಂದ ಅದನ್ನು cabinetಗೆ ತಂದು ಅತೀ ಶೀಘ್ರವಾಗಿ ಮಂಜೂರು ಮಾಡಿಸಿಕೊಡುವ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಶ್ರೀ ಸುರೇಶ್ ಎಸ್. ಮಾರಿಹಾಳ : ಆದಷ್ಟು ತೀವ್ರವಾಗಿ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ : ಪರಿಶೀಲನೆ ಮಾಡುತ್ತೇನೆ.

ಅವಧಿ ಪೂರ್ವ ವರ್ಗಾವಣೆ

192 (999) ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯಾದ್ಯಾಂತ ಕಾರ್ಯ ನಿರ್ವಹಿಸುತ್ತಿರುವ ಆಹಾರ ಶಿರಸ್ತೇದಾರರು ಹಾಗೂ ಆಹಾರ ನಿರೀಕ್ಷಕರುಗಳಲ್ಲಿ ಎಷ್ಟು ಜನರನ್ನು ಅವಧಿಪೂರ್ವ ವರ್ಗಾಯಿಸಲಾಗಿದೆ;

ಆ) ಈ ರೀತಿ ವರ್ಗಾಯಿಸಲು ಕಾರಣಗಳೇನು? ವಿವರಗಳನ್ನು ನೀಡುವುದು?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಈ ಇಲಾಖೆಯಲ್ಲಿ ಒಟ್ಟು 47 ಆಹಾರ ಶಿರಸ್ತೆದಾರರುಗಳ ವರ್ಗಾವಣೆಯನ್ನು ಮಾಡಲಾಗಿದ್ದು, ಅದರಲ್ಲಿ 33 ಅವಧಿಪೂರ್ವ ವರ್ಗಾವಣೆಯಾಗಿರುತ್ತದೆ.

ಈ ಇಲಾಖೆಯಲ್ಲಿ ಒಟ್ಟು 84 ಆಹಾರ ನಿರೀಕ್ಷಕರು/ಪ್ರ.ದ.ಸ. ಗಳನ್ನು ವರ್ಗಾವಣೆ ಮಾಡಲಾಗಿದ್ದು, ಅದರಲ್ಲಿ 41 ಅವಧಿ ಪೂರ್ವ ವರ್ಗಾವಣೆಯಾಗಿರುತ್ತದೆ.

ಆ) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ:4:ಸೇನೌವ:2006, ದಿನಾಂಕ: 10-4-2006ರಲ್ಲಿ ಅವಧಿಪೂರ್ವ ವರ್ಗಾವಣೆಗಳನ್ನು ಸಂಬಂಧಪಟ್ಟ ಸಚಿವರ ಅನುಮೋದನೆ ಪಡೆದು ಮಾಡಬಹುದೆಂದು ಆದೇಶಿಸಲಾಗಿದ್ದು, ಅದರಂತೆ ಈ ಇಲಾಖೆಯ ಆಹಾರ ಶಿರಸ್ತೇದಾರ್/ಆಹಾರ ನಿರೀಕ್ಷಕರುಗಳ 71 ಪ್ರಕರಣಗಳನ್ನು ಹಾಗೂ ಪತಿ ಪತ್ನಿ ಪ್ರಕರಣದಡಿ 3 ಅವಧಿಪೂರ್ವ ವರ್ಗಾವಣೆಗಳನ್ನು ಆಡಳಿತದ ಹಿತದೃಷ್ಟಿಯಿಂದ ಮಾಡಲಾಗಿದೆ.

ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಅವಧಿ ಪೂರ್ವ ವರ್ಗಾವಣೆಯನ್ನು ಶೇಕಡ 50ಕ್ಕಿಂತ ಹೆಚ್ಚು ಮಾಡಿದ್ದಾರೆ. ಕಾರಣಗಳು ಏನೆಂದು ಕೇಳಿದರೆ, ಆಡಳಿತದ ಹಿತದೃಷ್ಟಿಯಿಂದ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಇದು ಯಾವ ಆಡಳಿತದ ಹಿತದೃಷ್ಟಿಯೆಂಬುದು ನನಗಂತೂ ಅರ್ಥವಾಗುವುದಿಲ್ಲ. ಅಕ್ಬರ್‌ನ ರಾಜನ ಆಸ್ಥಾನದಲ್ಲಿ ಬೀರಬಲ್ ಇದ್ದನು. ನನ್ನ ರಾಜಾಸ್ಥಾನದಲ್ಲಿ ಕಳವು ಮಾಡುವವರೇ ಇಲ್ಲವೆಂದು ಅಕ್ಬರ್ ಹೇಳಿದನಂತೆ. ನಿನ್ನ ಮನೆಯಲ್ಲಿ ಕೆಲಸ ಮಡುವವರೂ ಕೂಡ ಕಳವು ಮಾಡುತ್ತಾರೆಂದು ಬೀರಬಲ್ ಹೇಳಿದನಂತೆ. ಇದಕ್ಕೆ ಅಕ್ಬರ್ ಸವಾಲು ಹಾಕಿದನಂತೆ. ಆತನ ದರ್ಜಿಯನ್ನು ಕರೆಸಿ, ಆತನಿಗೆ ಬಟ್ಟೆ ಹೊಲಿಯುವುದಕ್ಕೆ ಕೊಟ್ಟು ಆತನ ಮುಂದೆ ಕುಳಿತುಕೊಂಡನಂತೆ. ನಾನು ಆತನ ಎದುರಿನಲ್ಲಿ ಕುಳಿತುಕೊಂಡಿದ್ದೇನೆ. ಆತ ಕಳವು ಮಾಡುತ್ತಾನೆಯೇ ನೋಡಿ ಎಂದು ಅಕ್ಬರ್ ಹೇಳಿದನಂತೆ. ಬೀರಬಲ್ ಅಲ್ಲಿ ತಾಳ್ಮೆಯಿಂದ ಕುಳಿತುಕೊಂಡಿದ್ದನಂತೆ. ಅಲ್ಲಿಗೆ ಟೈಲರ್‌ನ ಮಗ ಬಂದನಂತೆ. ಮೊದಲ ಸಲ ಬಂದಾಗ ಸಣ್ಣ ಮಗು ಬಂದಿದೆ ಎಂದು ಅಕ್ಬರ್ ಆ ಮಗುವಿಗೆ ಒಂದು ಹಣ್ಣು ಕೊಟ್ಟು ಕಳುಹಿಸಿದನಂತೆ. ಮತ್ತೊಂದು ಸಲ ಆತನ ಮಗ ಬಂದ. ಆ ಸಂದರ್ಭದಲ್ಲಿ ಮತ್ತೆ ಒಂದು ಸ್ವೀಟ್ ಆತನಿಗೆ ಕೊಟ್ಟು ಕಳುಹಿಸಿದ. ಆದರೆ, ಆತನ ಮಗ ಮತ್ತೆ ಬಂದಾಗ ದರ್ಜಿ ಸಿಟ್ಟಿಗೆದ್ದು ತನ್ನ ಕಾಲಿನಲ್ಲಿದ್ದಂಥ ಬೂಟ್‌ನ್ನು ತೆಗೆದುಕೊಂಡು (ಈ ಹಂತದಲ್ಲಿ ಹಿಂದಿಯಲ್ಲಿ ಮಾತನಾಡಿದರು) ಎಷ್ಟು ಸಲ ಬರುತ್ತಿಯೋ ಉಪದ್ಯಾಪಿ ಎಂದು ಬೂಟ್‌ನ್ನು ಒಗೆದನಂತೆ. ಆ ಮಗುವನ್ನು ಹಿಡಿಯಿರೆಂದು ಬೀರ್‌ಬಲ್ ಹೇಳಿದನಂತೆ. ಆ ಮಗು ಬೂಟ್ ತೆಗೆದುಕೊಂಡು ಓಡುತ್ತಿದ್ದನಂತೆ. ಆತನನ್ನು ಹಿಡಿದು ಆ ಬೂಟನ್ನು ತೆಗೆದರೆ ಬಟ್ಟೆಯಲ್ಲಿದ್ದಂಥ ಬಂಗಾರ ಮತ್ತು ಬೆಳ್ಳಿಯ ಜರಿ ಮತ್ತು ಮುತ್ತು ರತ್ನ ಇರತಕ್ಕಂಥ ಬಟ್ಟೆಯನ್ನು ಕತ್ತರಿಸಿದ್ದಂಥದ್ದನ್ನು ಬೂಟ್‌ನಲ್ಲಿಟ್ಟು ಆತನ ಮೇಲೆ ಒಗೆದಿದ್ದನಂತೆ. ಆದ್ದರಿಂದ ಕಳ್ಳತನ ಮಾಡತಕ್ಕಂಥವರು ಮತ್ತು ಯಾರು ಕರ್ತವ್ಯ ಚ್ಯುತಿ ಮಾಡಿ ಬೇರೆಯವರಿಗೆ ಅನುಕೂಲಮಾಡಿಕೊಟ್ಟು ಸ್ವಾರ್ಥಕ್ಕೋಸ್ಕರ ಆಡಳಿತ ಮಾಡತಕ್ಕಂಥ ಅಧಿಕಾರಿಗಳು ಎಲ್ಲಿ ಹೋದರೂ ಅವರ ಕೆಲಸವನ್ನು ಮಾಡುತ್ತಾರೆ ಅವರ ಮೇಲೆ ನಿರ್ದಾಕ್ಷಿಣ್ಯವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅವಧಿ ಪೂರ್ವ ವರ್ಗಾವಣೆ ಪರಿಹಾರವೆಂದು ಸರ್ಕಾರ ತಿಳಿದುಕೊಳ್ಳಬಾರದು. ಈ ಒಂದು ಕಾರಣದಿಂದ ನಾನು ಮಂತ್ರಿಯವರಲ್ಲಿ ಕೇಳುವುದೇನೆಂದರೆ ಅವಧಿಪೂರ್ವ ವರ್ಗಾವಣೆಯಿಂದ ಸರ್ಕಾರದ ಮೇಲೆ ಆಗಿರತಕ್ಕಂಥ ಹೊರೆ ಎಷ್ಟು?

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಲ್ಲಿ 47 ಜನರಿಗೆ ವರ್ಗಾವಣೆ ಮಾಡಿದ್ದೇವೆ. ಇದರಲ್ಲಿ 33 ಜನ ವಿನಂತಿ ಮೇರೆಗೆ ವರ್ಗಾವಣೆ ಮಾಡಲಾಗಿದೆ. ಮತ್ತೆ ಇನ್ನೂ ಮೂರು ಪ್ರಕರಣಗಳಲ್ಲಿ ಪತಿ–ಪತ್ನಿಯರು ಒಂದು ಕಡೆ ಕೂಡಿಸುವ ಸಲುವಾಗಿ ಮಾಡಿರತಕ್ಕಂಥ ವರ್ಗಾವಣೆಯಾಗಿದೆ. ನಮ್ಮ ಇಲಾಖೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವರ್ಗಾವಣೆ

ಏನು ಆಗಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಶಾಸಕರಿಗೆ ಹೇಳುವುದಕ್ಕೆ ಬಯಸುವುದೇನೆಂದರೆ, ನಮ್ಮ ಇಡೀ ಇಲಾಖೆಯಲ್ಲಿ ಆಹಾರ ಶಿರಸ್ತೇದಾರರು, ಫುಡ್ ಇನ್ಸ್‌ಪೆಕ್ಟರ್ಸ್ ಮತ್ತು ಕ್ಲರ್ಕ್‌ಗಳೆಲ್ಲದನ್ನೂ ಸೇರಿ ಒಟ್ಟು 84 ಜನರಿಗೆ ವರ್ಗಾವಣೆ ಮಾಡಿದ್ದೇವೆ. ಮತ್ತೆ ಸರ್ವೇಸಾಮಾನ್ಯವಾಗಿ ಸರ್ಕಾರಗಳು ಬದಲಾವಣೆಯಾದಂಥ ಸಂದರ್ಭದಲ್ಲಿ ಶಾಸಕರು, ಮಂತ್ರಿಗಳು ಮತ್ತು ಸಂಸದರು ಸ್ವಲ್ಪ ಮಟ್ಟಿಗೆ ವರ್ಗಾವಣೆಗೆ ಶಿಫಾರಸ್ಸುಗಳನ್ನು ಮಾಡುತ್ತಾರೆ. ಯಾರ್ಯಾರು ತಕರಾರು ಮಾಡುತ್ತಾರೆ ಮತ್ತೆ ಯಾರ್ಯಾರ ಮೇಲೆ ದೂರುಗಳು ಬರುತ್ತವೆಂದೋ ಅಂಥ ಸಂದರ್ಭದಲ್ಲಿ ನಾವು ವರ್ಗಾವಣೆಯನ್ನು ಮಾಡಬೇಕಾಗುತ್ತದೆ. ವರ್ಗಾವಣೆಯನ್ನು ಆಡಳಿತ ದೃಷ್ಟಿಯಿಂದ ಮತ್ತು ದೂರುಗಳು ಬಂದಂಥ ದೃಷ್ಟಿಯಿಂದ ಕೂಡ ಮಾಡಬೇಕಾಗುತ್ತದೆ. ಹಾಗೆಯೇ ಮಾನ್ಯ ಶಾಸಕರುಗಳ ಶಿಫಾರಸುಗಳನ್ನು ಕೂಡ ಪರಿಗಣಿಸಬೇಕಾಗುತ್ತದೆ. ಈ ಎಲ್ಲ ಕಾರಣಕ್ಕಾಗಿ ವರ್ಗಾವಣೆಗಳು ಆಗಿವೆ. ಇದರಿಂದ ಸರ್ಕಾರಕ್ಕೆ ಆಗಿರತಕ್ಕಂಥ ಹೊರೆ ಎಷ್ಟೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಸದ್ಯಕ್ಕೆ ಈ ಬಗ್ಗೆ ಸಂಬಂಧಪಟ್ಟಂಥ ಮಾಹಿತಿ ಇಲ್ಲ. ತರಿಸಿ ಕೊಡುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ : ಆಯಿತು.

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರ ಪ್ರಶ್ನೆಗೆ ಮಂಗಳವಾರ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ. ಆ ದಿವಸ ತೆಗೆದುಕೊಳ್ಳುತ್ತೇನೆ.

ಹಾಸನ ಜಿಲ್ಲೆಯಲ್ಲಿ ಟಾಸ್ಕ್‌ಫೋರ್ಸ್ ಕಾಮಗಾರಿಗಳ ಅನುಷ್ಠಾನ.

194 (832) ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯಲ್ಲಿ ಟಾಸ್ಕ್‌ಫೋರ್ಸ್‌ನಡಿ ಕೈಗೊಂಡಿರುವ ಕಾಮಗಾರಿಗಳನ್ನು 1999ರ ಪಾರದರ್ಶಕತೆ ಕಾಯ್ದೆಯನ್ವಯ ಅನುಷ್ಠಾನಗೊಳಿಸಿರುತ್ತದೆಯೇ;

ಆ) ಹಾಗಿದ್ದಲ್ಲಿ, ಒಟ್ಟು ಕೈಗೊಂಡಿರುವ ಕಾಮಗಾರಿಗಳು ಯಾವುವು;

ಇ) 1999ರ ಪಾರದರ್ಶಕತೆ ಕಾಯ್ದೆಯನ್ವಯ ಸದರಿ ಕಾಮಗಾರಿಗಳಿಗೆ ಅನುಸರಿಸಿರುವ ಮಾರ್ಗಗಳೇನು; (ವಿಭಾಗವಾರು ಮಾಹಿತಿ ಒದಗಿಸುವುದು)

ಈ) ಈ ಕಾಮಗಾರಿಗಳ ಅನುಷ್ಠಾನಕ್ಕೆ ಪಾರದರ್ಶಕತೆ ಕಾಯ್ದೆಯಿಂದ ಯಾವುದಾದರೂ ಸಂದರ್ಭದಲ್ಲಿ ವಿನಾಯಿತಿಯನ್ನೇನಾದರು ಸರ್ಕಾರ ಕೊಟ್ಟಿದೆಯೇ; (ಕೊಟ್ಟಿದ್ದಲ್ಲಿ ಮಾಹಿತಿ ಒದಗಿಸುವುದು);

ಉ) ಸರ್ಕಾರದ ಪಾರದರ್ಶಕ ನೀತಿಯನ್ವಯ ಅನುಮೋದಿತ ಸರಬರಾಜು ಸಂಸ್ಥೆಗಳಿಂದಲೇ ಸಾಮಗ್ರಿಗಳನ್ನು ಖರೀದಿಸಲಾಗಿದೆಯೇ? (ಅನುಸರಿಸಿರುವ ಮಾರ್ಗ ಮತ್ತು ಮಾಹಿತಿಯನ್ನು ಒದಗಿಸುವುದು)